## ನೇತ್ರದಾನದ ಸಾಮಾಜಿಕ ಅರಿವು

ಪುನೀತ್ ರಾಜಕುಮಾರ್ ಸ್ಮರಣೆಗೆ ಝಿ ಕನ್ನಡ ರೂಪಿಸಿದ್ದ ಪುನೀತ್ ರಾಜ್‌ಕುಮಾರ್ ಗೀತ ನಮನ ಕಾರ್ಯಕ್ರಮವು ನೇತ್ರ ದಾನದ ಅರಿವು, ಜಾಗೃತಿ ಮೂಡಿಸಿ ಸಾಮಾಜಿಕ ಕಳಕಳಿಯನ್ನು ವೀಕ್ಷಕರಿಗೆ ತಲುಪಿಸಿದ್ದು ಶ್ಲಾಘನೀಯ.

ಪುನೀತ್ ಸಾವಿನ ಬಳಿಕ 400 ಜನರಿಂದ ನೇತ್ರದಾನ; ಹತ್ತು ಸಾವಿರ ಜನರ ನೋಂದಣಿ ಪುನೀತ್‌ಗೆ ಸಂದ ಗೌರವವೇ ಆಗಿದೆ. ನಾರಾಯಣ ನೇತ್ರಾಲಯ ವ್ಯವಸ್ಥಾಪಕ ನಿರ್ದೇಶಕ ಡಾ. ಕೆ. ಭುಜಂಗ ಶೆಟ್ಟಿಯವರು, ಪುನೀತ್‌ರ ಕಣ್ಣುಗಳು ನಾಲ್ವರಿಗೆ ಉಪಯೋಗವಾದ ಪರಿಯನ್ನು ವಿವರಿಸಿದರು. ಕಾರ್ಯಕ್ರಮ ಜನೋಪಯೋಗಿ ಎಂದೆನಿಸಿತು.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ವಿಪರ್ಯಾಸ

ಬೆಳ್ಳಿತೆರೆಯಲ್ಲಿ ಹಾಸ್ಯ ಪ್ರವೃತ್ತಿಯಿಂದ ಪಾತ್ರಗಳಿಗೆ ಜೀವ ತುಂಬುತ್ತಾ ರಂಜಿಸುತ್ತಿದ್ದ ನಟ ಶಿವರಾಂ ಅವರು ಜೀವನ ಸಂಜೆಯಲ್ಲಿ ನೇಪಥ್ಯಕ್ಕೆ ಸರಿದದ್ದು ವಿಷಾದನೀಯ. ಚಿತ್ರರಂಗದಲ್ಲಿ ನಟನೆ ಮಾತ್ರವಲ್ಲದೆ ಬೇರೆ ಬೇರೆ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಸ್ಟಾರ್ ಸುವರ್ಣದ 'ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ'ದಲ್ಲಿ ಗುರುಗಳ ಪಾತ್ರದಲ್ಲಿ ತೊಡಗಿಸಿಕೊಂಡಿದ್ದರು. ಅದರಲ್ಲಿ ಊರ ಮಂದಿಯ ಕಷ್ಟಸುಖಗಳಿಗೆ ಸ್ಪಂದಿಸುತ್ತಾ ಸಿದ್ಧಲಿಂಗೇಶ್ವರನಿಗೆ ಮಾರ್ಗದರ್ಶನ ನೀಡುತ್ತಿದ್ದರು. ಇಹದ ಪಾತ್ರ ಸಾಕೆಂದು ಪರದತ್ತ ಪಯಣಿಸಿದ ಅವರಿಗೆ ಧಾರಾವಾಹಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಬಹುದಾಗಿತ್ತು. ಆ ಹಿರಿಯ ಜೀವಕ್ಕೆ ಗೌರವ ಸಲ್ಲಿಸಿದಂತಾಗುತಿತ್ತು.

–ಪೂರ್ಣಿಮಾ ಮೂರ್ತಿ, ಬೆಂಗಳೂರು

ವಾರದ ಪತ್ರ

## ಸಂಗೀತದ ರಸದೌತಣ

ಚಂದನ ವಾಹಿನಿಯಲ್ಲಿ ನಿರೂಪಕ ಗುರುರಾಜ್ ಅವರು 'ಮರೆಯದ ಮಾಣಿಕ್ಯ' ಕಾರ್ಯಕ್ರಮದಲ್ಲಿ ಅರ್ಧ ಗಂಟೆಯಷ್ಟು ಸಮಯ ಸಂಗೀತದ ಅಪ್ಪಟ ರಸದೌತಣವನ್ನು ಉಣಬಡಿಸುತ್ತಿದ್ದಾರೆ.

'ಮರೆಯದ ಮಾಣಿಕ್ಯ'ವು ಸಾಹಿತ್ಯಮಯ ಸಂಗೀತದ ಅದ್ಭುತ ಕಾರ್ಯಕ್ರಮವಾಗಿದ್ದು ಕನ್ನಡ ಚಿತ್ರರಂಗದಲ್ಲಿ ಆಗಿಹೋದ ಕಲಾ ಕುಸುಮಗಳಿಗೆ ಕನ್ನಡದ ಸುಮಧುರ ಚಿತ್ರಗೀತೆಗಳೊಂದಿಗೆ ಸಾರ್ಥಕ ಶ್ರದ್ಧಾಂಜಲಿ ಅರ್ಪಿಸುತ್ತಿದೆ. ಜೊತೆಗೆ ಎಲೆಮರೆಯ ಕಾಯಿಯಂತಿರುವ ಅನೇಕ ಪ್ರತಿಭಾವಂತ ಹಾಡುಗಾರರನ್ನು ಸಂಚಿಕೆಯಿಂದ ಸಂಚಿಕೆಗೆ ವಾಹಿನಿಯ ವೀಕ್ಷಕರಿಗಾಗಿ ಪರಿಚಯಿಸುತ್ತಿದೆ.

ರಾಜ್‌ಕುಮಾರ್, ಎಸ್.ಪಿ. ಬಾಲಸುಬ್ರಹ್ಮಣ್ಯಂ, ವಿಷ್ಣುವರ್ಧನ್ ಮತ್ತು ಪುನೀತ್ ರಾಜ್‌ಕುಮಾರ್ ಅವರ ನೆನಪಿನಲ್ಲಿ ಅವರು ಅಭಿನಯಿಸಿದ/ ಹಾಡಿದ ಚಿತ್ರಗಳ ಹಾಡುಗಳ ಸವಿ ಸೊಗಡನ್ನು ಕನ್ನಡ ವೀಕ್ಷಕರಿಗಾಗಿ ಉಣಬಡಿಸುತ್ತಿರುವುದು ಹಾಗೂ ತನ್ಮೂಲಕ ಯಾವುದೇ ಆಡಂಬರವಿಲ್ಲದೆ ಕಲಾವಿದರನ್ನು ನೆನಪಿಸಿಕೊಳ್ಳುತ್ತಿರುವುದು ಅಗಲಿದ ಕಲಾವಿದರಿಗೆ ಸಲ್ಲಿಸುತ್ತಿರುವ ನಿಜ ಗೌರವವಾಗಿದೆ.

ಅಪ್ಪಟ ಕನ್ನಡದ ಸುಶ್ರಾವ್ಯ ಸಂಗೀತವನ್ನಾಲಿಸಿದ ಬಳಿಕ ಪ್ರಶಾಂತಗೊಂಡ ವೀಕ್ಷಕರ ಮೈ ಮನಸ್ಸು ಸದ್ದಿಲ್ಲದೆ ನಿದ್ದೆಗೆ ಜಾರಲು ಅನುವು ಕೂಡಾ ಮಾಡಿಕೊಡುತ್ತದೆ. ಅಬ್ಬರದ ಆಡಂಬರ ಮೆರೆಯುವ ಇತರ ಖಾಸಗಿ ವಾಹಿನಿಗಳಿಗೆ ಮಾದರಿಯೂ ಆಗಿದೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ನಮ್ಮಮ್ಮ ಸೂಪರ್ ಸ್ಟಾರ್

ಕಲರ್ಸ್ ಕನ್ನಡದ 'ನಮ್ಮಮ್ಮ ಸೂಪರ್ ಸ್ಟಾರ್' ಅದ್ಭುತ ಕಾರ್ಯಕ್ರಮ. ಅದರಲ್ಲಿ ಭಾಗವಹಿಸಿದ ಮಕ್ಕಳು, ಅಮ್ಮಂದಿರ ಆಟ ಮಾತುಕತೆ ಅದರಲ್ಲೂ ವಂಶಿ ತಾನು ಹುಟ್ಟು ಪ್ರತಿಭೆ ಎನ್ನುವುದನ್ನು ಆರಂಭದಿಂದಲೂ ತೋರಿಸಿದ್ದಾಳೆ.

'ಅವಳು ಮನಮೋಹಕ ಮಾತು, ಡಾನ್ಸ್, ಆಟ ಎಲ್ಲದರಲ್ಲೂ ಎತ್ತಿದ ಕೈ. ಅದರಲ್ಲೂ ಆರ್ಯ, ವಂಶಿ ಇಬ್ಬರ ಆಟ ಮತ್ತು ಅವರ ನಡವಳಿಕೆ ಸೊಗಸಾಗಿತ್ತು. ಒಟ್ಟಾರೆ ವಾರಾಂತ್ಯಕ್ಕೆ ಕಾದು ನೋಡುವ ಕುತೂಹಲವನ್ನು ಇದು ಹುಟ್ಟಿಸಿದೆ.

–ಸೀತಾ ಕೇಶವ, ಸಿಡ್ನಿ

## ಸರಿಯಾದ ಆಯ್ಕೆ ಎನಿಸುತ್ತಿಲ್ಲ

ಮಂಗಳಗೌರಿ ಮದುವೆಯಲ್ಲಿ ಈವರೆಗೆ ಎಸ್.ಪಿ. ರಾಜೀವ್‌ನ ಪಾತ್ರ ನಿರ್ವಹಿಸುತ್ತಿದ್ದ ಗಗನ ಚಿನ್ನಪ್ಪರ ಬದಲಿಗೆ ಬಂದ ಪೃಥ್ವಿ ನಂದನ್ ಆ ಪಾತ್ರಕ್ಕೆ ಅಷ್ಟಾಗಿ ಸೂಟ್ ಆಗುವಂತೆ ಕಾಣುವುದಿಲ್ಲ. ಧಾರಾವಾಹಿಯ ಅವರ ಮೊದಲ ಕಂತಿನಲ್ಲಿಯೇ ವೀಕ್ಷಕರಲ್ಲಿ ಈ ಭಾವನೆ ಮೂಡಿದೆ.

ಎಸ್.ಪಿ ಆಗುವವರಿಗೆ ದಷ್ಟಪುಷ್ಟ ದೇಹ, ಅಂಗಸೌಷ್ಟವ ಮತ್ತು ನೋಡಲು ಲವಲವಿಕೆ ಇದ್ದರೆ ಚೆನ್ನಾಗಿರುತ್ತದೆ. ಈ ಕೊರತೆ ಹೊಸ ನಟರಲ್ಲಿ ಎದ್ದು ಕಾಣುತ್ತದೆ. ಹಾಗೆಯೇ ಅವರು ನಟನೆಯಲ್ಲೂ ಇನ್ನೂ ಪಳಗಬೇಕು ಎನಿಸುತ್ತದೆ.

–ರಮಾನಂದ ಶರ್ಮಾ, ಬೆಂಗಳೂರು

## ಸಾರ್ಥಕತೆ ಮೂಡಿತು

ಕಲರ್ಸ್ ಕನ್ನಡದ 'ಎದೆ ತುಂಬಿ ಹಾಡುವೆನು' ರಿಯಾಲಿಟಿ ಶೋನ ಫೈನಲ್ಸ್‌ನಲ್ಲಿ ವಿನೂತನ ಪ್ರಯೋಗ ನಡೆಯಿತು. ಒಬ್ಬೊಬ್ಬ ಸ್ಪರ್ಧಿಗಳ ಜೊತೆ ಬೇರೆ ಬೇರೆ ವಾದ್ಯಗಾರರು ತಮ್ಮ ವಾದ್ಯದ ಪಾಂಡಿತ್ಯವನ್ನೇ ಪ್ರದರ್ಶಿಸಿದರು.

ವೀಣೆ, ಕೊಳಲು, ಶಹನಾಯ್ (ಸನಾದಿ ಅಪ್ಪಣ್ಣ ಚಿತ್ರದ ಹೈಲೈಟ್ ಅಂದರೆ ಬಿಸ್ಮಿಲ್ಲಾ ಖಾನ್ ಶಹನಾಯಿ ವಾದನ) ಸಾಹಸಸಿಂಹ ವಿಷ್ಣುವರ್ಧನ್ ಅಭಿನಯದ ಚಲನಚಿತ್ರವೊಂದರ ಗೀತೆಯಾದ 'ಈ ಭಾವ ಗೀತೆ ನಿನಗಾಗಿ ಹಾಡಿದೆ' ಇದನ್ನು ಸ್ಪರ್ಧಿಯೊಬ್ಬರು ಹಾಡುವ ಮೊದಲು ಎರಡು ನಿಮಿಷಗಳ ಕಾಲ ನುಡಿಸಿದ ವಯೊಲಿನ್ ವಾದನವು ಎಲ್ಲರನ್ನೂ ಮಂತ್ರಮುಗ್ಧಗೊಳಿಸಿತು. ಈ ಎಲ್ಲಾ ಸಂಗೀತ ವಾದ್ಯಗಳು ಅಬ್ಬಾ ಒಂದಕ್ಕಿಂತ ಒಂದು ವಿಶೇಷ. ಈ ರೀತಿಯ ವಿಭಿನ್ನ ಪ್ರಯೋಗ ಎದೆ ತುಂಬಿ ಹಾಡುವೆನು ರಿಯಾಲಿಟಿ ಶೋನ ಘನತೆಯನ್ನು ಹೆಚ್ಚಿಸಿದುದಲ್ಲದೆ, ಈ ಶೀರ್ಷಿಕೆಯೇ ನಿಜಕ್ಕೂ ಅನ್ವರ್ಥ ಹಾಗೂ ಸಾರ್ಥಕವೆನಿಸಿತು.

–ಟಿ.ಎಸ್. ಪ್ರತಿಭಾ ಚಿತ್ರದುರ್ಗ

## ಅದ್ಭುತ ಭೂಮಿಕಾ

ಕಲರ್ಸ್ ಕನ್ನಡದ 'ಚಿಕ್ಕೆಜಮಾನಿ' ನಮ್ಮ ಕುಟುಂಬದ ಸದಸ್ಯರ ಮನಸೂರೆಗೊಂಡಿದೆ. ಬ್ರಿಟಿಷರ ಕಾಲದ ಕಥಾಹಂದರವಿದ್ದು, ಮೂಲ ಬಂಗಾಳಿ ಭಾಷೆಯಾದರೂ, ಕನ್ನಡ ಭಾಷೆಗೆ ಕುಂದು ಬಾರದಂತೆ ಬರೆಯಲಾದ ಅಚ್ಚುಕಟ್ಟಾದ ಸಂಭಾಷಣೆ ಹಿತವೆನಿಸುತ್ತದೆ.

ಭೂಮಿಕಾ ಪಾತ್ರಧಾರಿಣಿಯ ಅಭಿನಯ ಅದ್ಭುತವಾಗಿದೆ. ಕಂಠದಾನ ಮಾಡಿದ ಕಲಾವಿದೆಯ ಮಾತುಗಳು ಭೂಮಿಕಾಳ ಪಾತ್ರಕ್ಕೆ ಸರಿಹೊಂದುತ್ತಿದ್ದು ಇತರೆ ಧಾರಾವಾಹಿಗಳಿಗೆ ಹೋಲಿಸಿದಲ್ಲಿ 'ಚಿಕ್ಕೆಜಮಾನಿ' ಒಳ್ಳೆಯ ಸ್ಥಾನ ಪಡೆಯುವುದರಲ್ಲಿ ಸಂಶಯವಿಲ್ಲ.

–ಜಿ. ನಾಗೇಂದ್ರ, ಕಾವೂರು, ಸಂಡೂರು

## ದಾಂಪತ್ಯದ ನಾಟಕ

ಝೀ ಕನ್ನಡದ 'ಜೊತೆ ಜೊತೆಯಲಿ' ಧಾರಾವಾಹಿ ಇತ್ತೀಚಿನ ಸಂಚಿಕೆಗಳು ಮೊದಲಿನ ಆಕರ್ಷಣೆಯನ್ನು ಕಳೆದುಕೊಂಡಿದೆ. ಶೀರ್ಷಿಕೆಗೆ ವ್ಯತಿರಿಕ್ತವಾದ ಅಪಹರಣ, ಕ್ರೌರ್ಯವನ್ನು ಸೃಷ್ಟಿಸಲಾಗಿದೆ. ನಾಯಕ–ನಾಯಕಿ ಮದುವೆಯಾದರೂ ಒಬ್ಬರನ್ನೊಬ್ಬರು ಮಾತನಾಡಿಸುವ ನಾಟಕೀಯ ಸಂಭಾಷಣೆ ಅಸಹನೀಯ. ವಾಹಿನಿ ಹಾಗೂ ನಿರ್ದೇಶಕರು ಜನಪ್ರಿಯತೆ ಉಳಿಸಿಕೊಳ್ಳಲು ಗಮನವಹಿಸುವುದು ಅಗತ್ಯ ಹಾಗೂ ಒಳ್ಳೆಯದು

–ಎಂ.ಆರ್. ಚಂದ್ರಶೇಖರ್